ಮರೆತುಬಿಡುತ್ತಾರೆ. ಗಂಡು ಹೆಣ್ಣಿನ ನಿಜವಾದ ಪ್ರೇಮ ಮನಸ್ಸನ್ನು ಅರಳಿಸುವುದಿಲ್ಲ; ನಾಳೆ ಮದುವೆಯಾಗುವವರದಾದರೂ ಸರಿ. ಅವರು ಗುಟ್ಟಾಗಿ ಏನೋ ಮಾಡಬಾರದ್ದನ್ನು ನಡೆಸಿದ್ದಾರೆನ್ನುವ ಸಣ್ಣ ಸಂಶಯವೂ ಜನರ ಕುತೂಹಲವನ್ನು ಕೆರಳಿಸಿಬಿಡುತ್ತದೆ. ಥೂ ಅಸಹ್ಯವೆಂದುಕೊಂಡರೂ ಏನೂ ಮಾಡಲಾಗುವುದಿಲ್ಲ.

ಗೌರವ್ ಮತ್ತು ಮನಿಶ್ ಮದುವೆಯಾಗಿ ಈಗ ಅಮೆರಿಕದಲ್ಲಿದ್ದಾರೆ. ಬಿಂದುಸಾರಳ ಫ್ರಾನ್ಸ್ ಟೂರು ಮುಗಿದು ಮತ್ತೆ ಅವಳು ಕೇರಳದ ಆರು ತಿಂಗಳ ಆಯುರ್ವೇದದ ಪ್ರವಾಸ ಮುಗಿಸಿ... 'ಹೈ ಡಿಯರ್, ಬರಲಾ ಆಫೀಸಿಗೆ?' ಎಂದಾಗ, 'ನೋ ಡಿಯರ್... ಇಲ್ಲಿಗೆ ಬರಬೇಡ, ಹೊರಗೇ ಅನುಪಮಾದಲ್ಲಿ ಸಿಗೋಣ' ಎಂದೆ.

ಯಾವ ಪೀಠಿಕೆಯಿಲ್ಲದೇ ನೇರವಾಗಿಯೇ ನಾನವಳನ್ನು ಕೇಳಿದ್ದೆ: 'ಯಾಕೆ ವಾಪಸ್ ಬಂದೆ?'

'ಅವನಿಗೆ ಕ್ಯಾನ್ಸರ್ ಆಗಿದೆಯಂತೆ, ನೀನು ಹೋಗು ಅಂದ...' ಸುಳ್ಳೇ ಅನಿಸಿತು.

'ಪಾಪ, ಕ್ಯಾನ್ಸರ್ ಆಗಿದ್ರೆ ನಿಜವಾಗಿ ಇದೇ ಸಮಯವಲ್ಲವೇ ಒಬ್ಬ ಗೆಳತಿಯಾಗಿ, ಸಂಗಾತಿಯಾಗಿ ನೀನವನನ್ನು ನೋಡಿಕೋಬೇಕಾದ್ದು? ಜೊತೆಯಿರಬೇಕಾದ್ದು?' ಅಂದೆ.

'ನೋ, ಅವನೇ ಬೇಡ ಅಂದ.'

ನಾನೇನನ್ನೂ ಮುಂದೆ ಅವಳಿಗೆ ಕೇಳಲಿಲ್ಲ.

ಯಾವತ್ತೋ ಚೇರ್‌ಮನ್ ಸೆಕ್ರೆಟರಿ ಹೇಳಿದ್ದಳು – 'ಜೇಸಿಯನ್ನು ಡೈರೆಕ್ಟರ್‌ಶಿಪ್‌ನಿಂದಲೇ ಡಿಸ್ಮಿಸ್ ಮಾಡಿದ್ದಾರಂತೆ...' ಎಂದು.

ಜಿಮ್ಮಿ ವೀಕೆಂಡಲ್ಲಿ ಪೂರ್ತಿ ಫೇಸ್‌ಬುಕ್‌ನಲ್ಲೇ ಹೆಚ್ಚು ಕಾಲ ಕಳೀತಾನೆ. ನಾನಾಗ ಆಫೀಸಿನಲ್ಲಿಯೇ ಇದ್ದೆ, ಕಿಟಕಿಯಲ್ಲಿ ಸಂದೇಶ ಮಿಂಚಿತು...

'ಹೈ ರಮ್ಯಾ, ಕ್ಯಾನ್ ವಿ ಹ್ಯಾವ್ ಎ ಕಪ್ ಆಫ್ ಕಾಫೀ?'

'ಯಾವಾಗ?'

'ಇವತ್ತು ಸಂಜೆ?'

'ನೋಡ್ತಿನಿ.'

'ಬೇಗ ತಿಳಿಸು, ನನಗೆ ನಿನ್ನ ಬಂದು ಪಿಕ್ ಮಾಡೋಕೆ ಇಪ್ಪತ್ತು ನಿಮಿಷಗಳಾದರೂ ಬೇಕು.'

ಯಾಕೋ ಘಮಘಮಿಸುವ ಕಾಫಿ ವಾಸನೆಯೇ ಇಲ್ಲದ ಈ ಊರಿನಲ್ಲಿ, ಮಳಮಳಿಸುವ ಬೋರಿಂಗ್ ಹಗಲಿನಲ್ಲಿ, ಯಾಕೋ ಕಾಫಿ ಹೆಸರು ಕೇಳಿ ಮೂಗರಳಿತು, ಬಾಯಲ್ಲಿ ನೀರೂರಿತು, ಮನಸ್ಸೂ ಬೇಕೆಂದಿತು.

'ಸರಿ, ಓಕೆ' ಅಂದೆ.

'ಓಕೆ, ಏಳೂವರೆಗೆ ಬರಲಾ? ಗೇಟ್ ನಂಬರ್ ಎರಡರ ಹತ್ತಿರ ಬರ್ತೀನಿ.'

ಇವತ್ತು ಅದೇ ಆಫೀಸಿನ ಸಲವಾರ್, ಚೂಡಿದಾರ್ ಬೇಸರವಾಗಿ ಅಳ್ಳಕವಾದ ಕುರ್ತಾ ತೊಟ್ಟು, ಜೀನ್ಸ್ ಹಾಕಿಕೊಂಡೆ. ಬಿಗಿದು ಕ್ಲಿಪ್ ಹಾಕಿದ ಕೂದಲನ್ನು ಬಾಚಿ ಹಾಗೇ ಗಾಳಿಗೆ ಬಿಟ್ಟೆ. ಸ್ವಲ್ಪ ಖುಶಿಯೆನಿಸುತ್ತಿತ್ತು. ಬಹಳ ದಿನಗಳ ಮೇಲೆ ಹೀಗೆ ಹೊರಗೆ ಹೋಗುತ್ತಿದ್ದುದಕ್ಕೆ.

ಕಾಫಿ ಜತೆ ಒಂದು ಕಾರ್ನ್ ಅಂಡ್ ಪಾಲಕ್ ಸ್ಯಾಂಡ್‌ವಿಚ್ ತಿಂದರೂ ಮುಗೀತು ನನ್ನ ಡಿನ್ನರ್. ಆಮೇಲೆ ಆರಾಮಾಗಿ ಬಂದು ಓದುವುದನ್ನೋ, ಬರೆಯುವುದನ್ನೋ ಮಾಡಬಹುದು. ಹಾಗೆ ಒಂದು ಬದಲಾವಣೆ...

ಹೇಳಿದ ಸಮಯಕ್ಕೆ ಜಿಮ್ಮಿ ಗೇಟ್ ಹತ್ತಿರ ಕಾಯುತ್ತಿದ್ದ.